21.3.2022 99

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ ಇವರು ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ

ವಿಷಯ:

ರಾಜ್ಯದ ಕಾರ್ಮಿಕ ವೇತನ ವಿಷಯ ಅನುಸಾರ ದೇಶದಲ್ಲಿ ಕಾರ್ಮಿಕರ ಸಂಖ್ಯೆ ದಿನ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಆದರೆ, ಕಾರ್ಮಿಕರಿಗೆ ಸಿಗಬೇಕಾದ ಕನಿಷ್ಠ ವೇತನ ಹಾಗೂ ಸೌಕರ್ಯಗಳು ಸಿಗುತ್ತಿಲ್ಲ. ಇದಕ್ಕೆ ಯಾವ ಕಾರಣಗಳಿವೆ ಎಂದು ಸುಮಾರು ವರ್ಷಗಳಿಂದ ಕಾರ್ಮಿಕರ ಬೇಡಿಕೆ ಇದ್ದರು ಕೂಡ ಕನಿಷ್ಠ ಸಮಯ ಕನಿಷ್ಠ ವೇತನ, ಮೂಲಭೂತ ಸೌಕರ್ಯ ಹಾಗೂ ಇನ್ನಿತರ ಕಾರ್ಮಿಕರಿಗೆ ದೊರಕಬೇಕಾದ, ಸೌಲಭ್ಯ ಸಿಗುತ್ತಿಲ್ಲ. ಇದರಿಂದ ದುಡಿಯುವ ಕಾರ್ಮಿಕ ಹಾಗೂ ಕುಟುಂಬ ನಿರ್ವಹಣೆ ಸಮಸ್ಯೆಯಾಗಿರುವ ಕುರಿತು.

ಉತ್ತರ:

ಸರ್ಕಾರವು ಪ್ರಸ್ತುತ 83 ಅನುಸೂಚಿತ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ, ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಿದ್ದು, ನಿಯಮಾನುಸಾರ ಕಾಲಕಾಲಕ್ಕೆ ದರಗಳನ್ನು ಪರಿಷ್ಕರಿಸಲಾಗುತ್ತಿದೆ. 2021-22 ನೇ ಸಾಲಿಗೆ ಸದರಿ ಅನುಸೂಚಿತ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠದಿಂದ ಗರಿಷ್ಠ ವೇತನ ದರಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಸಲ್ಲಿಸಿದೆ.

ಸರ್ಕಾರವು ಕನಿಷ್ಠ ವೇತನ ಕಾಯ್ದೆ, 1948ರಡಿ ನಿರೀಕ್ಷಕರನ್ನು ಅಧಿಸೂಚಿಸಿದ್ದು, ಈ ನಿರೀಕ್ಷಕರು ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಕಾರ್ಖಾನೆಗಳು, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಭೇಟಿ ನೀಡಿ, ತಪಾಸಣೆ ನಡೆಸಿ, ಕನಿಷ್ಠ ವೇತನ ಪಾವತಿಸದಿರುವ ಪ್ರಕರಣಗಳು ಕಂಡುಬಂದಲ್ಲಿ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 20ರಡಿ ನೇಮಕ ಮಾಡಲಾದ ಕ್ಲೇಮ್ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ದಾಖಲು ಮಾಡಲಾಗುತ್ತದೆ.

ಕನಿಷ್ಠ ವೇತನ ಕಾಯ್ದೆ, 1948ರಡಿ 2019-20ನೇ ಸಾಲಿನಲ್ಲಿ 4898, 2020-21ನೇ ಸಾಲಿನಲ್ಲಿ 4380 ಮತ್ತು 2021-22(ನವೆಂಬರ್-2021ರ ಅಂತ್ಯಕ್ಕೆ) ಸಾಲಿನಲ್ಲಿ 3695 ತಪಾಸಣೆಗಳನ್ನು ಮಾಡಲಾಗಿರುತ್ತದೆ.

ಕಳೆದ 3 ವರ್ಷಗಳ ಅವಧಿಯಲ್ಲಿ ಒಟ್ಟು 33,916 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.87,68,72,289/- ಮೊತ್ತದ 3244 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ 3 ವರ್ಷಗಳಲ್ಲಿ 15063 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.27,80,78,017/- ಮೊತ್ತಕ್ಕೆ ಆದೇಶ ಹೊರಡಿಸಿ ಒಟ್ಟು 3222 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ. (ವಿವರವನ್ನು ಅನುಬಂಧ-2ರಲ್ಲಿ ಸಲ್ಲಿಸಿದೆ)

ಸಂಖ್ಯೆ: ಎಲ್‌ಡಿ 43 ಎಲ್ ಡಬ್ಲ್ಯೂಎ 2022

(ಅರಬೈಲ್ ಶಿವರಾಮ್ ಹೆಬ್ಬಾರ್)

ಕಾರ್ಮಿಕ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ ಇವರು
ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ

**ಅನುಬಂಧ-1**

**2021-22ನೇ ಸಾಲಿನ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮತ್ತು ಪರಿಷ್ಕರಣೆ ಕುರಿತ ಕನಿಷ್ಠ ಮತ್ತು ಗರಿಷ್ಠ ವೇತನ ದರಗಳ ವಿವರಣೆ**

| ಕ್ರ ಸಂ | ಅನುಸೂಚಿತ ಉದ್ದಿಮೆಯ ಹೆಸರು | ಕನಿಷ್ಠ ವೇತನ ದರಗಳು (2021-22) | | | |
|---|---|---|---|---|---|
| | | ದೈನಿಕ | | ಮಾಸಿಕ | |
| | | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ |
| 1 | ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ | 441.28 | 448.28 | 11473.16 | 11473.16 |
| 2 | ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ. | 431.60 | 506.60 | 11221.60 | 13171.60 |
| 3 | ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 383.90 | 443.52 | 9981.60 | 11531.60 |
| 4 | ಅಡಿಕೆ (ಸುಪಾರಿ)ಉದ್ದಿಮೆಗಳಲ್ಲಿ ಉದ್ಯೋಗ | 451.27 | 511.97 | 11733.20 | 13311.03 |
| 5 | ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ) | 431.60 | 557.60 | 11221.60 | 14497.60 |

| | | | | | |
|---|---|---|---|---|---|
| 6 | ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ. | 451.28 | 659.49 | 11733.20 | 17146.60 |
| 7 | ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ | 240.61 | 294.45 | 11756.60 | 16356.00 |
| 8 | ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 9 | ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 10 | ಹಿತ್ತಾಳೆ. ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 11 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಪ್ರೀ- ಸ್ಟ್ರೆಸ್ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ | 451.28 | 617.16 | 11733.20 | 16046.20 |
| 12 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 13 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 341.00 | 366.03 | 8866.00 | 9517.00 |
| 14 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 15 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. | 431.60 | 501.60 | 11221.60 | 13041.60 |
| 16 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ | 431.60 | 495.60 | 11221.60 | 12885.60 |

| | | | | | |
|---|---|---|---|---|---|
| 17 | ಏಲಕ್ಕಿ ಮಲೈಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 18 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. | 422.15 | 477.05 | 10976.00 | 12406.00 |
| 19 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 431.60 | 503.60 | 11221.60 | 13093.60 |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) | 357.15 | 363.15 | 9286.00 | 9416.00 |
| 21 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) | 366.15 | 400.15 | 9500.00 | 10398.00 |
| 22 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ | 451.28 | 659.49 | 11733.20 | 17146.60 |
| 23 | ಕ್ಲಬ್‌ಗಳಲ್ಲಿ ಉದ್ಯೋಗ | 431.60 | 496.60 | 11221.60 | 12911.60 |
| 24 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. | 451.15 | 555.42 | 11730.00 | 14441.00 |
| 25 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. | 451.28 | 605.56 | 11733.20 | 15744.47 |
| 26 | ಹತ್ತಿ ಹೆಕ್ಕುವ, ಅಮಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. | 434.16 | 491.73 | 11288.28 | 12784.80 |
| 27 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ | 451.22 | 526.22 | 11731.60 | 13681.60 |

| | | | | | |
|---|---|---|---|---|---|
| 28 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ | 451.22 | 536.22 | 11731.60 | 14461.60 |
| 29 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ | 431.60 | 526.60 | 11221.60 | 13691.60 |
| 30 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. | 431.60 | 506.60 | 11221.60 | 13171.60 |
| 31 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. | 451.28 | 659.49 | 11733.60 | 17146.60 |
| 32 | ಇಂಜಿನಿಯರಿಂಗ್, ಫ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 33 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ | 431.60 | 521.60 | 11221.60 | 13561.60 |
| 34 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 404.45 | 606.60 | 11871.60 | 15771.60 |

| | | | | | |
|---|---|---|---|---|---|
| 35 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 36 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ | 511.91 | 605.56 | 13311.03 | 15744.47 |
| 37 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಪ್) ಗಳಲ್ಲಿ ಉದ್ಯೋಗ | 431.60 | 557.60 | 11221.60 | 14497.60 |
| 38 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ | 431.60 | 511.60 | 11221.60 | 13301.60 |
| 39 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 40 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. | 409.84 | 473.30 | 10656.00 | 12306.00 |
| 41 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ | 451.22 | 641.19 | 11731.60 | 16671.60 |

| | | | | | |
|---|---|---|---|---|---|
| 42 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ | 431.60 | 518.60 | 11221.60 | 13483.60 |
| 43 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೋಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ | 431.60 | 536.68 | 11221.60 | 13951.60 |
| 44 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. | 456.60 | 518.60 | 11871.60 | 13483.60 |
| 45 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 46 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 431.60 | 521.60 | 11221.60 | 13561.60 |
| 47 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |

| | | | | | |
|---|---|---|---|---|---|
| 48 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ. ವಿತರಣೆ ಜಾಹಿರಾತು ವಿಭಾಗಗಳ ಸಹಿತ) | 431.60 | 531.60 | 11221.60 | 13821.60 |
| 49 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್– [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 51 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್–ಫೆರಸ್] | 451.28 | 659.49 | 11733.20 | 17146.60 |
| 52 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. | 431.60 | 496.60 | 11221.60 | 12911.60 |
| 53 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 54 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. | 431.60 | 501.60 | 11211.60 | 13041.60 |
| 55 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |

| | | | | | |
|---|---|---|---|---|---|
| 56 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 496.60 | 11221.60 | 12911.60 |
| 57 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 503.60 | 11221.60 | 13093.60 |
| 58 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 59 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). | 591.22 | 641.22 | 15371.00 | 16671.60 |
| 60 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 61 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |
| 62 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 63 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |

| | | | | | |
|---|---|---|---|---|---|
| 64 | ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 65 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ | 431.60 | 526.60 | 11221.60 | 13961.60 |
| 66 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). | 451.22 | 576.60 | 11731.60 | 14991.60 |
| 67 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–1 | 418.74 | 605.50 | 10887.20 | 15744.47 |
| 68 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ–2 | 451.28 | 659.49 | 11733.20 | 17146.60 |
| 69 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 70 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ | 351.88 | 378.73 | 9148.87 | 9847.08 |
| 71 | ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ–ಇನ್‌ಫೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |

| | | | | | |
|---|---|---|---|---|---|
| 72 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |
| 73 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 74 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 345.26 | 384.26 | 8976.80 | 10000.80 |
| 75 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ | 354.21 | 413.41 | 9204.30 | 10758.86 |
| 76 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | 419.36 | 512.95 | 10903.39 | 13336.70 |
| 77 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 78 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 79 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ | 466.60 | 14991.60 | 12131.60 | 16751.60 |
| 80 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ | 451.28 | 659.99 | 11733.20 | 17146.60 |

| | | | | | |
|---|---|---|---|---|---|
| 81 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 82 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ | 356.57 | 423.19 | 9270.95 | 11003.07 |
| 83 | ಸರಕು ಸಾಮಗ್ರಿಗಳ ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ | ತುಂಡು ಆಧಾರ | | | |

# ಅನುಬಂಧ-2

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ

| ಕ್ರ ಸಂ | ವರ್ಷ | ಕನಿಷ್ಠ ವೇತನ ಕಾಯ್ದೆಯಡಿ ನಡೆಸಲಾದ ತಪಾಸಣೆಗಳ ಸಂಖ್ಯೆ | ಕನಿಷ್ಠ ವೇತನ ಕಾಯ್ದೆಯಡಿ ದಾಖಲಿಸಿದ ಕ್ಲೇಮ್ ಅರ್ಜಿಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ | ಕ್ಲೇಮ್ ಮೊತ್ತ | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ | ಕಾರ್ಮಿಕ ಸಂಖ್ಯೆ |
|---|---|---|---|---|---|---|---|---|
| 1 | 2019-20 | 4898 | 1669 | 17947 | 50,41,99,390-00 | 1258 | 9,98,96,516-00 | 6901 |
| 2 | 2020-21 | 4380 | 971 | 9266 | 15,48,83,803-00 | 765 | 12,31,08,130-00 | 5394 |
| 3 | 2021-22 | 3695 | 604 | 6703 | 21,77,89,096-00 | 1199 | 5,50,73,371-00 | 2768 |
| | ಒಟ್ಟು | 12973 | 3244 | 33916 | 87,68,72,289-00 | 3222 | 27,80,78,017-00 | 15063 |

Answered on 29.03.2022 (99)

**ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ & ಶ್ರೀ ಎಸ್. ಎಲ್. ಭೋಜೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು-ಇವರು ನಿಯಮ 330 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:-** ರಾಜ್ಯದ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವರ್ಷಕ್ಕೆ 2 ಕೋಟಿ ರೂ.ಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. MLA ರವರಿಗೆ 5 ವರ್ಷ MLC ರವರಿಗೆ 6 ವರ್ಷ ಪದಾಧಿಕಾರದವಧಿ ಇರುತ್ತದೆ. ಸದರಿ ಅವಧಿಯಲ್ಲಿ ಬಿಡುಗಡೆಯಾಗುವ ಈ ಅನುದಾನವನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಖರ್ಚು ಮಾಡಲಾಗುತ್ತದೆ. ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅನುಷ್ಠಾನ ಏಜೆನ್ಸಿ ಇಂಜಿನಿಯರಿಂಗ್ ವಿಭಾಗಗಳಿಂದ 2 ವರ್ಷಗಳದೊಳಗೆ ಅವಧಿಗಳೊಳಗೆ ಅನುದಾನವನ್ನು ಖರ್ಚು ಮಾಡಲು ಕಷ್ಟ ಸಾಧ್ಯವಿರುತ್ತದೆ. ಸದಸ್ಯರ ಪದಾಧಿಕಾರದವಧಿಯಲ್ಲಿ ತಮ್ಮ ಒಟ್ಟು ಎಲ್ಲಾ ಅನುದಾನವನ್ನು ಖರ್ಚು ಮಾಡುವುದು ವಾಡಿಕೆಯಾಗಿರುತ್ತದೆ.

ಆದರೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರು ದಿನಾಂಕ:17.02.2022 ರಂದು ಪಿಡಿಎಸ್ 82 ಕೆಎಲ್‌ಎಸ್ 2022 (ಭಾಗ-1) ಪತ್ರದಲ್ಲಿ ಮಾನ್ಯ ಸಭಾಪತಿಯವರನ್ನು ಬಿಟ್ಟು ಸಭೆ ನಡೆಸಿ ನಿರ್ಧಾರ ಕೈಗೊಂಡು ಮಾನ್ಯ ವಿಧಾನ ಪರಿಷತ್ ಸದಸ್ಯರ ಅಧಿಕಾರವನ್ನು ಮೊಟಕುಗೊಳಿಸಿ, 2 ವರ್ಷಗಳಿಗೆ ಮಾತ್ರ ಸೀಮಿತಗೊಳಿಸಿ ನಮ್ಮ ಅನುದಾನವನ್ನು ಹಿಂಪಡೆಯುವ ಆದೇಶ ಮಾಡಿರುವುದು ನಿಜಕ್ಕೂ ದುರದೃಷ್ಟಕರ. ಆದ್ದರಿಂದ ಈ ಆದೇಶವನ್ನು ರದ್ದುಗೊಳಿಸುವುದರೊಂದಿಗೆ ಇದರ ಸಂಬಂಧ ಮಾನ್ಯ ಸಭಾಪತಿಯವರು ದಿನಾಂಕ:21.02.2022 ರಂದು ಬರೆದಿರುವ ಪತ್ರದಂತೆ ಆದೇಶ ಹೊರಡಿಸಬೇಕೆಂದು ಮಾನ್ಯ ತೋಟಗಾರಿಕೆ ಯೋಜನೆ ಹಾಗೂ ಸಾಂಖ್ಯಿಕ ಸಚಿವರೊಂದಿಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

******

**ಉತ್ತರ:-**

ಕರ್ನಾಟಕ ಸರ್ಕಾರವು, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು 2013-14ನೇ ಸಾಲಿನಿಂದ ಪ್ರತಿ ಕ್ಷೇತ್ರಕ್ಕೆ ರೂ.200.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು 2014-ರಲ್ಲಿ ಪರಿಷ್ಕೃತ ಮಾರ್ಗಸೂಚಿ ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿ ಕಂಡಿಕೆ-4.1 ರಲ್ಲಿ ಈ ಕೆಳಕಂಡಂತೆ ಸೂಚಿಸಲಾಗಿದೆ.

"ಯೋಜನಾ ಇಲಾಖೆಯು ನೋಡಲ್ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನದಲ್ಲಿರುವ ಕಾಮಗಾರಿಗಳ ವಾಸ್ತವಿಕ ಮತ್ತು ಹಣಕಾಸು ಪ್ರಗತಿಯ ಆಧಾರದ ಮೇಲೆ ಹಾಗೂ ಕಾಮಗಾರಿಗಳಿಗೆ ಇನ್ನೂ ಹೆಚ್ಚಿನ ನಿಧಿಗಳ ಅಗತ್ಯತೆಯ ಆಧಾರದ ಮೇಲೆ ನಿಧಿಯನ್ನು <u>"ವರ್ಷಕ್ಕೆ ಎರಡು ಕಂತುಗಳಲ್ಲಿ"</u> ಬಿಡುಗಡೆ ಮಾಡತಕ್ಕದ್ದು, ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು <u>"ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ"</u>. ಆ ಮೊತ್ತವು ಮುಂದಿನ ವರ್ಷದಲ್ಲಿ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದು ಪಡಿಸಲಾಗುವುದು. ಅಲ್ಲದೆ ಆ ವರ್ಷದಲ್ಲಿ <u>ನಿಧಿಗಳನ್ನು ಕ್ಲೇಮು ಮಾಡದಿದ್ದಲ್ಲಿ, "ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು"</u> ಎಂದು ಉಲ್ಲೇಖಿಸಲಾಗಿದೆ. ಅನುಬಂಧ-1.

ಅದರಂತೆ, ಮಾನ್ಯ ವಿಧಾನ ಪರಿಷತ್ತಿನ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ:13.08.2021 ರಂದು ಐದು ಜಿಲ್ಲಾಧಿಕಾರಿಗಳು ಮತ್ತು ಐವರು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರನ್ನೊಳಗೊಂಡ ಸಮಿತಿಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ 1) ಶ್ರೀ ಕೆ.ಸಿ.ಕೊಂಡಯ್ಯ, 2) ಶ್ರೀ ಎನ್. ರವಿ, 3) ಶ್ರೀ ನಿರಾಣಿ ಹಣಮಂತ್ ರುದ್ರಪ್ಪ 4) ಎನ್. ಅಪ್ಪಾಜಿ ಗೌಡ ಹಾಗೂ 1) ರಾಮನಗರ, 2) ಕೋಲಾರ, 3) ಚಿಕ್ಕಬಳ್ಳಾಪುರ, 4) ಬೆಂಗಳೂರು ಗ್ರಾಮಾಂತರ ಮತ್ತು 5) ಬೆಂಗಳೂರು ನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಇವರುಗಳನ್ನೊಳಗೊಂಡ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, <u>ಪ್ರಾರಂಭವಾಗದೆ ಇರುವ ಕಾಮಗಾರಿಗಳ ಅನುದಾನವನ್ನು ಹಿಂಪಡೆಯಲು ನಿರ್ಣಯಕ್ಕೆಗೊಂಡಿದ್ದು</u>, ಸದರಿ ನಿರ್ಣಯದಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ, ದಿನಾಂಕ:09.08.2021 ರಂದು ಆರ್ಥಿಕ ಇಲಾಖೆಯ ಹಿಂಬರಹದನ್ವಯ ಬ್ಯಾಂಕ್ ಖಾತೆ ತೆರೆದು, ಪ್ರಾರಂಭವಾಗದೇ ಇರುವ ಕಾಮಗಾರಿಗಳ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗಿದೆ. ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ದಿನಾಂಕ:13.08.2021ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆ ಅಂಶಗಳು ಈ ಕೆಳಕಂಡಂತಿದೆ:-

1. 2021-22ನೇ ಸಾಲಿಗೆ ರೂ.2.00 ಕೋಟಿಗಳಿಗೆ ಕ್ರಿಯಾಯೋಜನೆ ತಯಾರಿಸಲು ಸಹಮತಿ ನೀಡಿದೆ. ಆದ್ದರಿಂದ, ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ರೂ.2.00 ಕೋಟಿಗಳಿಗೆ ಕ್ರಿಯಾ ಯೋಜನೆ ರೂಪಿಸಿ ಅನುಮೋದನೆ ನೀಡುವುದು.

2. KLLADS ಮಾರ್ಗಸೂಚಿಗಳ ಕಂಡಿಕೆ 3.2 ರ ಅನುಸಾರ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸತಕ್ಕದ್ದು. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ/ಬಿಡುಗಡೆಯಾಗುವ **(ಶಾಸಕರುವಾರು ಬಿಡುಗಡೆಯಾಗುವುದಿಲ್ಲ)** ಅನುದಾನದಲ್ಲಿ ಭರಿಸತಕ್ಕದ್ದು.

3. ಇನ್ನು ಮುಂದೆ ಯೋಜನಾ ಇಲಾಖೆಯು ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಕ್ರಮವಹಿಸುತ್ತದೆ. ಆದ್ದರಿಂದ, ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.2.00 ಕೋಟಿಗಳ ಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಆಧರಿಸಿ ಹಣ ಪಾವತಿಸಲು ಸೂಕ್ತ ಕ್ರಮವಹಿಸುವುದು.

4. 2020-21ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು, ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಪತ್ರ ಕ್ಷೇತ್ರಕ್ಕೆ ರೂ.1.00 ಕೋಟಿಯನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.

5. 2018-19ನೇ ಸಾಲಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ ಬಿಡುಗಡೆಗೆ ಬಾಕಿ ಇರುವ (ರೂ.127.69 ಕೋಟಿಗಳನ್ನು) ನಾಲ್ಕನೇ ಕಂತಿನ ಬಂಡವಾಳ ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತುತ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿದ ನಂತರ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

6. KLLADS ಮಾರ್ಗಸೂಚಿ ಪ್ಯಾರ 4.1 ರಂತೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪ್ರಾರಂಭವಾಗದೇ ಉಳಿದಿರುವ ಕಾಮಗಾರಿಯ ಅನುದಾನವನ್ನು ಕೂಡಲೇ ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸತಕ್ಕದ್ದು. ಅನುಬಂಧ-2.

ಇದೇ ವಿಷಯದ ಬಗ್ಗೆ ಬೆಳಗಾಂ ವಿಧಾನಸಭಾ ಅಧಿವೇಶನದಲ್ಲಿ ಚರ್ಚಿಸಲಾಗಿದ್ದು, ಮಾನ್ಯ ವಿಧಾನ ಸಭಾಧ್ಯಕ್ಷರು ದಿನಾಂಕ:21.12.2021 ರಂದು ಪತ್ರ ನೀಡಿ, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿರುವುದನ್ನು ತಡೆಹಿಡಿಯುವಂತೆ ಕೋರಿರುತ್ತಾರೆ. ಸದರಿ ಸೂಚನೆಯ ಮೇರೆಗೆ ಕೆಲ್ಯಾಡ್ಸ್ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವುದನ್ನು ತಾತ್ಕಾಲಿಕವಾಗಿ ಹಾಗು ಮುಂದಿನ ಆದೇಶದವರೆಗೂ ತಡೆಹಿಡಿಯಲಾಗಿತ್ತು. ತದನಂತರ, ದಿನಾಂಕ:27.01.2022 ರಂದು ಮಾನ್ಯ ವಿಧಾನಸಭೆಯ ಸಭಾಪತಿಗಳ ಹಾಗೂ ಮಾನ್ಯ ಯೋಜನಾ ಸಚಿವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿದೆ.

...3

1. ಪ್ರಸ್ತುತ ವಿಧಾನಸಭೆಯ ಶಾಸಕರು 2018 ರಲ್ಲಿ ಆಯ್ಕೆಯಾಗಿ ಬಂದಿರುವುದರಿಂದ, ಈ ವರ್ಷ ವಿಶೇಷ ಪ್ರಕರಣವೆಂದು ಪರಿಗಣಿಸಿ ಕಂಡಿಕೆ-4.1 ಅನುದಾನ ಸಡಿಲಗೊಳಿಸಿ 2018-19 ರಿಂದ 2020-21ರ ಸಾಲಿಗೆ ಸಂಬಂಧಪಟ್ಟ ಕಾಮಗಾರಿಗಳು ಈಗಲೂ ಪ್ರಾರಂಭವಾಗದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಡಿಸಿ/ಎಡಿಸಿ/ಎಸಿ ರವರುಗಳಿಂದ ಹಾಗೂ ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿಗಳನ್ನು ಮಾರ್ಚ್ 2022ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವುದು ಹಾಗೂ ಇದಕ್ಕೆ ಸಂಬಂಧಪಟ್ಟ ಅನುದಾನವನ್ನು ಯಥಾಃ ಸ್ಥಿತಿಯಲ್ಲಿ ಮುಂದುವರೆಸುವುದು.

2. 2018 ರ ಹಿಂದಿನ ಅವಧಿಯಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಜಮೆ ಮಾಡಲು, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲು ನಿರ್ಣಯಿಸಲಾಯಿತು. ಸದರಿ ನಿರ್ಣಯದ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಅದರಂತೆ, 2018 ರ ಹಿಂದಿನ ಅವಧಿಯಲ್ಲಿ ಆರಂಭವಾಗದೆ ಇರುವ ಕಾಮಗಾರಿಗಳ ಅನುದಾನವನ್ನು ವಾಪಸ್ಸು ಪಡೆಯಲು ಹಾಗೂ ಆರಂಭವಾಗಿರುವ ಕಾಮಗಾರಿಗಳನ್ನು ದಿನಾಂಕ:30.03.2022 ರ ಅಂತ್ಯದೊಳಗೆ ಪೂರ್ಣಗೊಳಿಸಲು ದಿನಾಂಕ:17.02.2022 ರ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಇವರು ತಿಳಿಸಿರುತ್ತಾರೆ. ಅನುಬಂಧ-4.

ಆದ್ದರಿಂದ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ-ಇವರು ಪತ್ರದ ಮೂಲಕ ನೀಡಿರುವ ನಿರ್ದೇಶನವು ಮಾನ್ಯ ವಿಧಾನಸಭೆ ಹಾಗೂ ವಿಧಾನ ಪರಿಷತ್ ಅಧ್ಯಕ್ಷರ ಸಹಮತಿಯ ಮೇರೆಗೆ ಸರ್ಕಾರವು ಕೈಗೊಂಡ ತೀರ್ಮಾನವಾಗಿದ್ದು, ಸದರಿ ತೀರ್ಮಾನವು ಕ್ರಮಬದ್ಧವಾಗಿರುತ್ತದೆ ಎಂಬ ಅಂಶವನ್ನು ಸದನದ ಗಮನಕ್ಕೆ ತರಲಾಗಿದೆ.

**ಸಂಖ್ಯೆ**:ಪಿಡಿಎಸ್ 31 ಕೆಎಲ್ಎಸ್ 2022.

(ಮುನಿರತ್ನ)
ಮಾನ್ಯ ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/82/ ಕೆಎಲ್‌ಎಸ್/2022(ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.02.2022.

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ,**
ಎಲ್ಲಾ ಜಿಲ್ಲಾಧಿಕಾರಿ,

**ಮಾನ್ಯರೇ,**

**ವಿಷಯ:-** ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 2018ರ ಹಿಂದಿನ ವರ್ಷಗಳಲ್ಲಿ ಪ್ರಾರಂಭವಾಗದೇ ಇರುವ ಕಾಮಗಾರಿಗಳಿಗೆ ನಿಗದಿ ಪಡಿಸಲಾದ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಹಿಂಪಡೆಯಲು ನಿರ್ಧರಿಸಲಾಗಿದೆ.

**ಉಲ್ಲೇಖ:-** ಸಭಾ ನಡವಳಿ ದಿನಾಂಕ:27.01.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸಭಾ ನಡವಳಿ ದಿನಾಂಕ:27.01.2022 ರಂದು ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಮತ್ತು ಮಾನ್ಯ ಯೋಜನಾ ಸಚಿವರೊಂದಿಗೆ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ.

1. 2018-19 ರಿಂದ 2020-21ರ ಸಾಲಿಗೆ ಸಂಬಂಧಪಟ್ಟ ಕಾಮಗಾರಿಗಳು ಈಗಲೂ ಪ್ರಾರಂಭವಾಗದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಹಾಗೂ ಅಭಿಯಂತರರುಗಳಿಂದ 2022ರ ಮಾರ್ಚ್ ಅಂತ್ಯದೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸುವುದು.

2. 2018ರ ಹಿಂದಿನ ಅವಧಿಯಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆ ಸಂಖ್ಯೆ:40491286183 ಗೆ ಕೂಡಲೇ ಜಮೆ ಮಾಡಲು, ಎಲ್ಲಾ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮವಹಿಸುವುದು.

ಉಲ್ಲೇಖಿತ ಸಭೆಯ ನಡವಳಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಅದರಂತೆ ಕ್ರಮವಹಿಸಲು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

**(ಡಿ.ಚಂದ್ರಶೇಖರಯ್ಯ)**
ನಿರ್ದೇಶಕರು, ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪ್ರತಿ:
1. ರಾಜ್ಯದ ಎಲ್ಲಾ ಜಿಲ್ಲೆಗಳ ಅಪರ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
4. ಕಚೇರಿ ಪ್ರತಿ.

ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಸಚಿವರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಸಮ್ಮುಖದಲ್ಲಿ ದಿನಾಂಕ: 27-01-2022ರಂದು ನಡೆದ ಸಭೆಯ ನಡವಳಿಗಳು:

**ವಿಷಯ:** ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 2 ವರ್ಷಗಳ ಹಿಂದಿನ ಅವಧಿ ಯಿಂದ ಪ್ರಾರಂಭವಾಗದೇ ಇರುವ ಕಾಮಗಾರಿಗಳಿಗೆ ನಿಗದಿ ಪಡಿಸಲಾದ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಹಿಂದಿರುಗಿಸುವ ಕುರಿತು.

ಸಭೆಯಲ್ಲಿ ಹಾಜರಿದ್ದವರು:

1. ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಸಭೆ.
2. ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆ ಸಚಿವರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಸಭೆಯಲ್ಲಿ ಹಾಜರಿದ್ದ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಸಭೆರವರನ್ನು ಹಾಗೂ ಮಾನ್ಯ ಸಚಿವರನ್ನು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರುಗಳನ್ನು ನಿರ್ದೇಶಕರು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಭಾಪತಿಗಳನ್ನು ಕೋರಿದರು.

ಸಭೆಯಲ್ಲಿ ಹಾಜರಿದ್ದ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡಿ ಈ ಹಿಂದೆ ದಿನಾಂಕ: 03.08.2021ರಂದು ಮಾನ್ಯ ಸಭಾಪತಿಗಳು ವಿಧಾನ ಪರಿಷತ್ತು ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ವಿಸ್ತೃತವಾಗಿ 05 ಜಿಲ್ಲೆಯ ಜಿಲ್ಲಾಧಿಕಾರಿಗಳು ಸೇರಿದಂತೆ ಚರ್ಚಿಸಲಾಗಿದೆ. ನಿಗದಿತ ಕಾಲಾವಧಿಯಲ್ಲಿ ಅನುದಾನ ವೆಚ್ಚವಾಗದೇ ಇರುವುದಕ್ಕೆ ಕಾರಣಗಳು ಮತ್ತು ಇತರೇ ಅಂಶಗಳನ್ನು ಚರ್ಚಿಸಲಾಗಿದೆ. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ 4.1ರಂತೆ 02 ವರ್ಷಗಳು ಕಳೆದರು

ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ ಅದರಂತೆ ಆರ್ಥಿಕ ಇಲಾಖೆಯ ಸಹಮತಿ ಪಡೆದು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಜಮೆ ಮಾಡಲು ದಿನಾಂಕ:16.11.2021ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಸದರಿ ಸೂಚನೆ ಆಧರಿಸಿ ದಿನಾಂಕ:21.12.2021 ರಂದು ತಾವು ಪತ್ರ ಮುಖೇನ ಸೂಚಿಸಿದಂತೆ ಜಿಲ್ಲಾಧಿಕಾರಿಗಳಿಂದ ಅನುದಾನ ವಾಪಸ್ ಪಡೆಯುವುದನ್ನು ತಡೆಹಿಡಿಯಲಾಗಿದೆ ಎಂದು ಮಾಹಿತಿ ನೀಡಿದರು.

ಮಾನ್ಯ ಸಭಾಪತಿಗಳು ಮಾನ್ಯ ಯೋಜನಾ ಸಚಿವರೊಂದಿಗೆ ಚರ್ಚಿಸಿದ ನಂತರ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಸೂಚಿಸಿ ನಿರ್ಣಯ ಕೈಗೊಂಡರು:-

1. 2018-19 ರಿಂದ 2020-21ರ ಸಾಲಿಗೆ ಸಂಬಂಧಪಟ್ಟ ಕಾಮಗಾರಿಗಳು ಈಗಲೂ ಪ್ರಾರಂಭವಾಗದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಡಿಸಿ/ಎಡಿಸಿ/ಎಸಿ ರವರುಗಳಿಂದ ಹಾಗೂ ಸಂಬಂಧಪಟ್ಟ ಅಭಿಯಂತರರುಗಳಿಂದ ಕಾಮಗಾರಿಗಳನ್ನು ಪೂರ್ಣ ಗೊಳಿಸಲು ಕ್ರಮವಹಿಸುವುದು. ಮಾರ್ಚ್-2022ರ ಅಂತ್ಯದೊಳಗೆ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವುದು ಹಾಗೂ ಇದಕ್ಕೆ ಸಂಬಂಧಪಟ್ಟ ಅನುದಾನವನ್ನು ಯತಃ ಸ್ಥಿತಿಯಲ್ಲಿ ಮುಂದುವರಿಸಲು ತೀರ್ಮಾನಿಸಲಾಯಿತು.

2. 2018ರ ಹಿಂದಿನ ಅವಧಿಯಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಜಮೆ ಮಾಡಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿನಾಂಕ: 16.11.2021ರ ಪತ್ರದಲ್ಲಿ ಸೂಚಿಸಿರುವಂತೆ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಮುನಿರತ್ನ),
**ಸಚಿವರು.**

ಅವಗಾಹಿಸಿದೆ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ,**
ಸಭಾಪತಿಗಳು,
ಕರ್ನಾಟಕ ವಿಧಾನಸಭೆ

ವಿಶ್ವೇಶ್ವರ ಹೆಗಡೆ, ಕಾಗೇರಿ
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/82/ ಕೆಎಲ್ಎಸ್/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13.08.2021

## ಸುತ್ತೋಲೆ

ದಿನಾಂಕ:03.08.2021ರಂದು ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್-ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (KLLADS) ಪೂರ್ಣ ಅನುದಾನ ಬಿಡುಗಡೆ ಮಾಡುವುದು ಹಾಗೂ 2021-22ನೇ ಸಾಲಿಗೆ ರೂ.1.00 ಕೋಟಿ ಬದಲು ರೂ.2.00 ಕೋಟಿಗಳ ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಮತ್ತು ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆ ರೂಪಿಸಿ, ಅನುಷ್ಠಾನಗೊಳಿಸುವುದು ಹಾಗೂ ಎರಡು ವರ್ಷಕ್ಕಿಂತ ಅವಧಿ ಮೀರಿದ ಕಾಮಗಾರಿಗಳ ಅನುದಾನವನ್ನು ಸರ್ಕಾರಕ್ಕೆ ಎಂಪಿಲ್ಯಾಡ್ಸ್ ಮಾದರಿಯಲ್ಲಿ ಅಧ್ಯರ್ಪಣೆ ಮಾಡುವ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು ಹಾಗೂ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ನಿರ್ಧರಿಸಲಾಯಿತು ಈ ಕುರಿತು ಆರ್ಥಿಕ ಇಲಾಖೆಯು ದಿನಾಂಕ:09.08.2021ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹದಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು /ಉಪ ವಿಭಾಗಾಧಿಕಾರಿಗಳು ಸೂಕ್ತ ಕ್ರಮವಹಿಸಿಲು ತಿಳಿಸಲಾಗಿದೆ.

1. 2021-22ನೇ ಸಾಲಿಗೆ ರೂ.2.00 ಕೋಟಿಗಳಿಗೆ ಕ್ರಿಯಾಯೋಜನೆ ತಯಾರಿಸಲು ಸಹಮತಿ ನೀಡಿದೆ. ಆದ್ದರಿಂದ ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ರೂ.2.00ಕೋಟಿಗಳಿಗೆ ಕ್ರಿಯಾಯೋಜನೆ ರೂಪಿಸಿ ಅನುಮೋದನೆ ನೀಡುವುದು.
2. KLLADS ಮಾರ್ಗಸೂಚಿಗಳ ಕಂಡಿಕೆ 3.2 ರ ಅನುಸಾರ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸತಕ್ಕದ್ದು. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಸರ್ಕಾರದಿಂದ ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ/ಬಿಡುಗಡೆಯಾಗುವ **(ಶಾಸಕರುವಾರು ಬಿಡುಗಡೆಯಾಗುವುದಿಲ್ಲ)** ಅನುದಾನದಲ್ಲಿ ಭರಿಸತಕ್ಕದ್ದು.
3. ಇನ್ನೂ ಮುಂದೆ ಯೋಜನಾ ಇಲಾಖೆಯು ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಕ್ರಮವಹಿಸುತ್ತದೆ. ಆದ್ದರಿಂದ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.2.00ಕೋಟಿಗಳ ಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಆಧರಿಸಿ ಹಣ ಪಾವತಿಸಲು ಸೂಕ್ತ ಕ್ರಮವಹಿಸುವುದು.
4. 2020-21ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು. ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಯನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.

5. 2018-19ನೇ ಸಾಲಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ ಬಿಡುಗಡೆಗೆ ಬಾಕಿ ಇರುವ (ರೂ.127.69 ಕೋಟಿಗಳನ್ನು) ನಾಲ್ಕನೇ ಕಂತಿನ ಬಂಡವಾಳ ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತುತ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿದ ನಂತರ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
6. KLLADS ಮಾರ್ಗಸೂಚಿ ಪ್ಯಾರ 4.1 ರಂತೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪ್ರಾರಂಭವಾಗದೇ ಉಳಿದಿರುವ ಕಾಮಗಾರಿಯ ಅನುದಾನವನ್ನು ಕೂಡಲೇ ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸತಕ್ಕದ್ದು.

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು,
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಪ್ರದೇಶಾಭಿವೃದ್ಧಿ, ಮಂಡಳಿ ವಿಭಾಗ,
ಯೋಜನೆ ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ವಿಧಾನ ಸಭೆ / ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
5. ಮಾನ್ಯ ಯೋಜನಾ ಸಚಿವರ ಪ್ರಧಾನ ಕಾರ್ಯದರ್ಶಿಯವರು.
6. ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಯೋಜನಾ ಇಲಾಖೆ.
11. ಶಾಖಾಧಿಕಾರಿ, ಸ್ಕೀಮರ ಶಾಖೆ, ಯೋಜನಾ ಇಲಾಖೆ (ಕಾಂಪೆಂಡಿಯಮ್‌ಗೋಸ್ಕರ).
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು. / ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವೆಬ್‌ಸೈಟ್‌ಗೆ.

ಅನುಬಂಧ - 1

3.12 ವಾಸ್ತವಿಕವಾಗಿ ನಿರ್ವಹಣಾ ಅವಧಿಯಲ್ಲಿ ಯಾವುದೇ ಮಾರ್ಪಾಡುಗಳು / ಬದಲಾವಣೆಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದಲ್ಲ ಮತ್ತು ಅಂಥ ಎಲ್ಲಾ ಹೊಂದಾಣಿಕೆಗಳನ್ನು, ಸಮಗ್ರ ಹಂಚಿಕೆಯು ಮೀರದಿರುವುದಕ್ಕೆ ಮಾತ್ರ ಒಳಪಟ್ಟು ಜಿಲ್ಲಾಮಟ್ಟದಲ್ಲಿಯೇ ಮಾಡತಕ್ಕದ್ದು. ಅಂಥ ಎಲ್ಲಾ ಮಾರ್ಪಾಡುಗಳಿಗೆ ಅನುಮೋದನೆ ನೀಡಲು ಜಿಲ್ಲಾಧಿಕಾರಿಯು ಸಕ್ಷಮರಾಗಿರುತ್ತಾರೆ.

3.13 ಸಾಮಾನ್ಯ ಹಣಕಾಸು ಮತ್ತು ಲೆಕ್ಕಪರಿಶೋಧನಾ ಪ್ರಕ್ರಿಯೆಗಳು ಈ ಮಾರ್ಗಸೂಚಿಗಳಿಗೊಳಪಟ್ಟು ಈ ಯೋಜನೆಯ ಮೇರೆಗೆ ತೆಗೆದುಕೊಂಡ ಎಲ್ಲಾ ಕ್ರಮಗಳಿಗೂ ಅನ್ವಯವಾಗುತ್ತವೆ.

3.14 ಈ ಯೋಜನೆಯ ಮೇರೆಗೆ ಪ್ರತಿ ವರ್ಷ ಮಾಡುವ ಹಂಚಿಕೆಯನ್ನು ಕ್ಷೇತ್ರಕ್ಕಾಗಿ ಮಾಡಲಾಗಿರುತ್ತದೆ. ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರು ಬದಲಾಗಬಹುದಾದರೂ, ಅಂಥ ಬದಲಾವಣೆಗೆ . ಕಾರಣಗಳೇನೇ ಇರಬಹುದು, ಯೋಜನೆಯ ಮೇರೆಗೆ ಕ್ಷೇತ್ರಕ್ಕಾಗಿರುವ ನಿಧಿ ಹಂಚಿಕೆಯನ್ನು, ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕ್ರಮ ಮುಂದುವರಿಕೆಯನ್ನು ಹಾಗೇ ನಿರ್ವಹಿಸಿಕೊಂಡು ಬರಬೇಕಾಗುತ್ತದೆ. ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಸಂಬಂಧದಲ್ಲಿ ಹಿಂದಿನ ಮತ್ತು ಈಗಿನ ಶಾಸಕರು ಹಾಗೂ ಸಂಬಂಧಪಟ್ಟ ಅನುಷ್ಠಾನ ಏಜೆನ್ಸಿಗಳ ನಡುವೆ ಸಮನ್ವಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

3.15 ಕಾರಣವೇನೇ ಇರಲಿ, ಶಾಸಕರು ಬದಲಾವಣೆಯಾದಾಗ, ಕೆಳಕಂಡ ತತ್ವಗಳನ್ನು ಸಾಧ್ಯವಾದಷ್ಟು ಮಟ್ಟಿಗೆ, ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕು.

(i) ಹಿಂದಿನ ಶಾಸಕರು ಗುರುತಿಸಿದ ಕಾಮಗಾರಿಯು ಕಾರ್ಯಗತಗೊಳ್ಳುತ್ತಿದ್ದಲ್ಲಿ ಅದನ್ನು ಪೂರ್ಣಗೊಳಿಸಬೇಕು.

(ii) ಹಿಂದಿನ ಶಾಸಕರಿಂದ ಗುರುತಿಸಲಾದ ಕಾಮಗಾರಿಯು ಆಡಳಿತಾತ್ಮಕ ಕಾರಣಗಳಿಂದಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಲಹೆ ಸ್ವೀಕರಿಸಿದಂಥ ದಿನಾಂಕದಿಂದ 60 ದಿನಗಳ ಅವಧಿ ಮೀರಿ ಮಂಜೂರಾಗದೆ ಬಾಕಿ ಉಳಿದಿದ್ದಲ್ಲಿ, ಕಾಮಗಾರಿಯು ಬೇರೆಲ್ಲಾ ರೀತಿಯಿಂದ ನಿಬಂಧನೆಗಳಿಗೆ ಅನುಸಾರವಾಗಿದ್ದಲ್ಲಿ, ಅದನ್ನೂ ಸಹ ಪೂರ್ಣಗೊಳಿಸಬೇಕು.

(iii) ಹಿಂದಿನ ಶಾಸಕರು ಕಾಮಗಾರಿಯನ್ನು ಗುರುತಿಸಿದ್ದಲ್ಲಿ, ಆದರೆ ಅದನ್ನು ಮೇಲಿನ ಹಿಂದಿನ ಉಪ-ಪ್ಯಾರಾದಲ್ಲಿ ತಿಳಿಸಿರುವಂಥ ಕಾರಣಕ್ಕಲ್ಲದೆ ಬೇರೆ ಕಾರಣಗಳಿಂದಾಗಿ ನಿರ್ವಹಿಸಲು ಕೈಗೆತ್ತಿಕೊಳ್ಳದಿದ್ದಲ್ಲಿ, ಹಾಲಿ ಶಾಸಕರ ಸ್ಥಿರೀಕರಣಕ್ಕೆ ಒಳಪಟ್ಟು ಅದನ್ನು ನಿರ್ವಹಿಸಬಹುದು.

3.16 ಸೃಜಿಸಿದ ಆಸ್ತಿ/ಕೈಗೊಂಡ ಕಾಮಗಾರಿಗಳ ಸ್ಥಳಗಳ ಛಾಯಾಚಿತ್ರಗಳನ್ನು ಕಾಮಗಾರಿಯನ್ನು ಪ್ರಾರಂಭಗೊಳಿಸುವ ಮೊದಲು ಮತ್ತು ಕಾಮಗಾರಿ ಮುಕ್ತಾಯಗೊಂಡ ನಂತರದ ಡಿಜಿಟೈಸ್ಡ್ ಫೋಟೋಗಳೊಂದಿಗೆ ಜಿಲ್ಲಾಡಳಿತವು ನಿರ್ವಹಿಸತಕ್ಕದ್ದು.

3.17 ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅನುದಾನದಿಂದ ಕ್ಷೇತ್ರವಾರು/ಶಾಸಕವಾರು ಕೈಗೊಂಡ ಕಾಮಗಾರಿಗಳು ಮತ್ತು ನಿರ್ಮಿಸಿದ ಆಸ್ತಿಗಳ ರಿಜಿಸ್ಟರ್ ಅನ್ನು ಜಿಲ್ಲಾಡಳಿತವು ನಿರ್ವಹಿಸುವುದು.

3.18 ಈ ಯೋಜನೆಗಾಗಿ ಜಿಲ್ಲಾಮಟ್ಟದಲ್ಲಿ ಪ್ರತ್ಯೇಕ ಲೆಕ್ಕವನ್ನು ನಿರ್ವಹಿಸುವುದು.

3.19 ಪ್ರತಿ ಜಿಲ್ಲೆಯ ವಾರ್ಷಿಕ ಲೆಕ್ಕವನ್ನು ಸ್ಥಳೀಯ ಜಿಲ್ಲಾ ಲೆಕ್ಕ ಪರಿಶೋಧಕರಿಗೆ ಮುಂದಿನ ಮೇ 15 ನೇ ತಾರೀಖಿನೊಳಗೆ ಲೆಕ್ಕಪರಿಶೋಧನೆಗೆ ಸಲ್ಲಿಸತಕ್ಕದ್ದು.

4 ನಿಧಿಗಳ ಬಿಡುಗಡೆ:

4.1 ಯೋಜನಾ ಇಲಾಖೆಯು ನೋಡಲ್ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನದಲ್ಲಿರುವ ಕಾಮಗಾರಿಗಳ ವಾಸ್ತವಿಕ ಮತ್ತು ಹಣಕಾಸು ಪ್ರಗತಿಯ ಆಧಾರದ ಮೇಲೆ ಹಾಗೂ ಕಾಮಗಾರಿಗಳಿಗೆ ಇನ್ನೂ ಹೆಚ್ಚಿನ ನಿಧಿಗಳ ಅಗತ್ಯತೆಯ ಆಧಾರದ ಮೇಲೆ ನಿಧಿಯನ್ನು ವರ್ಷಕ್ಕೆ ಎರಡು ಕಂತುಗಳಲ್ಲಿ ಬಿಡುಗಡೆ ಮಾಡತಕ್ಕದ್ದು. ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ. ಆ ಮೊತ್ತವು ಮುಂದಿನ ವರ್ಷದ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದುಪಡಿಸಲಾಗುವುದು. ಅಲ್ಲದೆ, ಆ ವರ್ಷದಲ್ಲಿ ನಿಧಿಗಳನ್ನು ಕ್ಲೇಮು ಮಾಡದಿದ್ದಲ್ಲಿ, ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು.